**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.153/2020**

**(ಚಾ.ಸಾ.2/ಪ್ರಾ.ಸಾ.1)**

ತಾಃ10-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಸಂಜಯ್ ಕುಮಾರ್ |
| ತಂದೆಯ ಹೆಸರು | ರಾಮಾಧರ್ ಶರ್ಮ |
| ವಯಸ್ಸು | 44 ವರ್ಷ |
| ಉದ್ಯೋಗ | ಡೆವಲಪರ್ಸ್ ಕಂಪನಿ ಮ್ಯಾನೇಜರ್ |
| ವಾಸ ಸ್ಥಳ | ತೂಬರಹಳ್ಳಿ, ಬೆಂಗಳೂರು |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

1. ನನಗೆ 1 ರಿಂದ 4 ನೇ ಆರೋಪಿತರ ಪರಿಚಯ ಇಲ್ಲ. ಚಾಸಾ.1 ಹಿಮಾಂಷು ನನ್ನ ಮಗನಾಗಿರುತ್ತಾರೆ. ನಾನು ವಿಷ್ಣು ಡೆವಲಪರ್ಸ್ ಕಂಪನಿಯಲ್ಲಿ ಕಳೆದ 25 ವರ್ಷದಿಂದ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ.3 ರವರು ಸದರಿ ಕಂಪನಿಯ ಮಾಲೀಕರಾಗಿರುತ್ತಾರೆ. 1 ನೇ ಆರೋಪಿ ನನ್ನ ಬಳಿ ಬಂದು ನಿವೇಶನವನ್ನು ಕಡಿಮೆ ಬೆಲೆಗೆ ತನಗೆ ಮಾರಾಟ ಮಾಡುವಂತೆ ನನ್ನ ಬಳಿ ಬಂದು ಕೇಳಿರಲಿಲ್ಲ. ಕಡಿಮೆ ಬೆಲೆಗೆ ನಿವೇಶನ ಮಾರದಿದ್ದಲ್ಲಿ ನನ್ನನ್ನು ಹಾಗೂ ನನ್ನ ಕುಟುಂಬದವರನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರಲಿಲ್ಲ. ಆರೋಪಿತರು ನನಗೆ ಇದೇ ವಿಚಾರವಾಗಿ ಹೊಡೆದು

ಬಡೆದು ಬೆದರಿಕೆ ಹಾಕಿರುವುದಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದೇಹಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡಿದಿರುತ್ತೇನೆ. ನನ್ನ ತಲೆ ಹಾಗೂ ಎಡಗೈಗೆ ಪೆಟ್ಟಾಗಿತ್ತು. ಆದ ಕಾರಣ ನಾನು 15 ದಿವಸಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದೆನು.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

1. 1 ನೇ ಆರೋಪಿ ನನ್ನ ಬಳಿ ಬಂದು ತಾನು ಸದರೀ ಏರಿಯಾದ ಮುಖಂಡನಾಗಿದ್ದು ತನಗೆ ಒಂದು ನಿವೇಶನವನ್ನು ಕಡಿಮೆ ಬೆಲೆಗೆ ಕೊಡುವಂತೆ ಹಲವಾರು ಬಾರಿ ಕೇಳಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಆತನ ಬಳಿ ನಾನು ಕಂಪನಿಯ ನೌಕರನಾಗಿದ್ದು, ಕಡಿಮೆ ಬೆಲೆಗೆ ನಿವೇಶನ ಬೇಕಾದ್ದಲ್ಲಿ ಕಂಪನಿಯ ಮಾಲೀಕರನ್ನು ಕೇಳುವಂತೆ ನಾನು ತಿಳಿಸಿದ್ದೆನು ಎಂದರೆ ಸರಿಯಲ್ಲ. ಈ ಘಟನೆ ಆಗುವ 1 ತಿಂಗಳ ಹಿಂದೆ ವಿಬ್ ಗಯಾರ್ ಶಾಲೆ ರಸ್ತೆಯ ಬಳಿ ಇರುವ ಹೈಲ್ಯಾಂಡ್ ಮಾರ್ಕೆಟ್ ಬಳಿ ನಾನು ನಿಂತಿದ್ದ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ನನ್ನ ಬಳಿ ಬಂದು ನಿವೇಶನವನ್ನು ಕಡಿಮೆ ಬೆಲೆಗೆ ಮಾರದಿದ್ದಲ್ಲಿ ನನ್ನನ್ನು ಹಾಗೂ ನನ್ನ ಕುಟುಂಬದವರನ್ನು ಹೊಡೆದು ಸಾಯಿಸಿಬಿಡುವುದಾಗಿ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ದಿನಾಂಕ 04-07-2020 ರಂದು ಸಂಜೆ ವೇಳೆ ನಾನು ಹಾಗೂ ಚಾಸಾ.1 ರವರು ಸಾಮಾನು ತರಲು ಬ್ರೂಕ್ ಫೀಲ್ಡ್ ಮಾಲ್ ಗೆ ಹೋಗಿದ್ದೆವು ಎಂದರೆ ಸರಿ. ಸಾಮಾನು ಖರೀದಿ ಮಾಡಿದ ನಂತರ ವಿಬ್

ಗಯಾರ್ ಶಾಲೆ ರಸ್ತೆಯ ಬಳಿ ಇರುವ ಹೈಲ್ಯಾಂಡ್ ಮಾರ್ಕೆಟ್ ಬಳಿ ನನ್ನ ಮಗನಿಗೆ ಸಾಮಾನು ತೆಗೆದುಕೊಂಡು ಮನೆಗೆ ಹೋಗುವಂತೆ ಹೇಳಿ ಆತನನ್ನು ಮನೆಗೆ ಕಳುಹಿಸಿದ್ದೆನು ಎಂದರೆ ಸರಿ. ನಂತರ ನನ್ನ ಸ್ನೇಹಿತರಾದ ಚಾಸಾ.4 ರಿಂದ 7 ರವರನ್ನು ಮಾತನಾಡಿಸಿರುತ್ತೇನೆ ಎಂದರೆ ಸರಿ. ನನ್ನ ಸ್ನೇಹಿತರನ್ನು ಮಾತನಾಡಿಸಿ ನಂತರ ಎಮ್.ಕೆ.ಆರ್. ಸ್ಪೋರ್ಟ್ಸ್ ಹಿಂಭಾಗ ವಾಟರ್ ಪ್ಲಾಂಟ್ ಹತ್ತಿರ ಕಾಲುದಾರಿಯಲ್ಲಿ ರಾತ್ರಿ 08:15 ರಲ್ಲಿ ಮನೆಗೆ ಹೋಗಲು ನಡೆದುಕೊಂಡು ಹೋಗುತ್ತಿದ್ದೆನು ಎಂದರೆ ಸರಿ.

2. ಆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ನನ್ನನ್ನು ಅಡ್ಡ ಹಾಕಿ ನಿಲ್ಲಿಸಿ ಕಡಿಮೆ ಬೆಲೆಗೆ ಸೈಟ್ ಕೊಡುವುದಿಲ್ಲವಾ ಎಂದು ಹೇಳಿ ನನಗೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 4 ಆರೋಪಿ ವಿನಯ್ ರೆಡ್ಡಿ ನನ್ನನ್ನು ಬಿಗಿಯಾಗಿ ಹಿಡಿದುಕೊಂಡಿದ್ದು, 1 ಆರೋಪಿ ಅಭಿಜಿತ್ ಒಂದು ಮಚ್ ನಿಂದ ಕೊಲೆ ಮಾಡುವ ಉದ್ದೇಶದಿಂದ ನನ್ನ ತಲೆಗೆ 2 ಏಟು ಹೊಡೆದು ರಕ್ತ ಗಾಯ ಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಪುನಃ 1 ಆರೋಪಿ ಅದೇ ಮಚ್ ನಿಂದ ನನಗೆ ಹೊಡೆಯಲು ಬಂದಾಗ ನಾನು ಎಡಗೈ ಅಡ್ಡ ಹಿಡಿದಾಗ ಒಂದು ಏಟು ಅಂಗೈ ಗೆ ಹಾಗೂ ಮತ್ತೊಂದು ಏಟು ಮೊಣಕೈ ಗೆ ಬಿದ್ದು ಬಾರೀ ರಕ್ತ ಗಾಯ ಆಗಿತ್ತು ಎಂದರೆ ಸರಿಯಲ್ಲ. ಪುನಃ 1 ಆರೋಪಿ ಅದೇ ಮಚ್ ನಿಂದ ನನ್ನ ಬಲಗಾಲಿಗೆ ಹೊಡೆದಾಗ ನಾನು ಕೆಳಗೆ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿ ವಿಶ್ವನಾಥ್ ಒಂದು ಚಾಕುವಿನಿಂದ ನನ್ನ ಹೊಟ್ಟೆ ಹಾಗೂ ಬೆನ್ನಿಗೆ ಹೊಡೆದು ಬಲ ತೊಡೆಗೆ ತಿವಿದು ರಕ್ತಗಾಯ ಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ 3 ನೇ ಆರೋಪಿ ರಾಕೇಶ್ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಒಂದು ಚಾಕುವಿನಿಂದ ನನ್ನ ಬೆನ್ನಿಗೆ, ಬುಜಗಳಿಗೆ ಹಾಗೂ ಬಲ ತೋಳಿಗೆ ಹೊಡೆದು ರಕ್ತಗಾಯ ಗೊಳಿಸಿರುತ್ತಾರೆ ಎಂದರೆ

ಸರಿಯಲ್ಲ. ನಂತರ 4 ಜನ ಆರೋಪಿತರು ಆಯುಧಗಳ ಸಮೇತ ಅಲ್ಲಿಂದ ಪರಾರಿ ಆಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳದಿಂದ ನಮ್ಮ ಅಪಾರ್ಟ್ ಮೆಂಟ್ ಗೆ ತೆವಳಿಕೊಂಡು ಹೋಗಿದ್ದು, ನನ್ನ ಮಗ ಹಾಗೂ ಮನೆಯವರು ಚಿಕಿತ್ಸೆಗಾಗಿ ನನ್ನನ್ನು Colombia Asia Hospital ಗೆ ದಾಖಲಿಸಿದ್ದರು ಎಂದರೆ ಸರಿ. ನಂತರ ನನ್ನನ್ನು ಹೆಚ್ಚಿನ ಚಿಕಿತ್ಸೆಗೆ ವೈದೇಹಿ ಆಸ್ಪತ್ರೆ ಗೆ ಸೇರಿಸಿದ್ದರು ಎಂದರೆ ಸರಿ. ಆರೋಪಿತರು ನನಗೆ ಹಲೆ ಮಾಡಿ ತಲೆಗೆ ಪೆಟ್ಟು ಮಾಡಿದ ಕಾರಣ ವೈದೇಹಿ ಆಸ್ಪತ್ರೆಯಲ್ಲಿ ನನ್ನ ಶಸ್ತ್ರಚಿಕಿತ್ಸೆ ಆಗಿತ್ತು ಎಂದರೆ ಸರಿಯಲ್ಲ, ಆದರೆ ಶಸ್ತ್ರಚಿಕಿತ್ಸೆ ಆಗಿತ್ತು. ನನಗೆ ತೀವ್ರ ಸ್ವರೂಪದ ಗಾಯ ಆಗಿ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ದಿನಾಂಕ 12-07-2020 ರಂದು ವೈದೇಹಿ ಆಸ್ಪತ್ರೆ ವೈದ್ಯರ ಸಮಕ್ಷಮ ಆರೋಪಿತರೇ ನನಗೆ ಹಲ್ಲೆ ಮಾಡಿರುವುದಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ.

3. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಕಾರಣ ನನ್ನ ಬಟ್ಟೆ ರಕ್ತ ಆಗಿತ್ತು ಎಂದರೆ ಸಾಕ್ಷಿಯು ಹಲ್ಲೆ ಮಾಡಿಲ್ಲ ಎಂದು ಉತ್ತರಿಸಿರುತ್ತಾರೆ. ಆ ದಿನ ನಾನು ನೈಟ್ ಪ್ಯಾಂಟ್ ಹಾಗೂ ಟಿ-ಷರ್ಟ್ ಧರಿಸಿದ್ದು ನನ್ನ ಬಟ್ಟೆಗಳು ಹಾಗೂ ಚಪ್ಪಲಿ ರಕ್ತ ಆಗಿತ್ತು. ರಕ್ತ ಆಗಿದ್ದ ನಾನು ಧರಿಸಿದ್ದ ಬಟ್ಟೆಗಳು ಹಾಗೂ ಚಪ್ಪಲಿಯನ್ನು ನೋಡಿದಲ್ಲಿ ನನಗೆ ಗುರುತಿಸಲು ಆಗುವುದಿಲ್ಲ. ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಮಚ್ಚು ಹಾಗೂ ಚಾಕು ನೋಡಿದಲ್ಲಿ ನನಗೆ ಗುರುತಿಸಲು ಆಗುವುದಿಲ್ಲ. ಘಟನೆ ಆದಾಗ ರಾತ್ರಿ ವೇಳೆ ಆಗಿದ್ದ ಕಾರಣ ನನಗೆ ಯಾರು ಹಲ್ಲೆ ಮಾಡಿರುತ್ತಾರೆಂದು ನನಗೆ ತಿಳಿದುಬಂದಿಲ್ಲ. ನನ್ನ ಮೇಲೆ ಚಾಕು ಹಾಗೂ ಮಚ್ಚುವಿನಿಂದ ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 4 ನೇ ಆರೋಪಿತರು ಹಲ್ಲೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಧರಿಸಿದ್ದ ಬಟ್ಟೆ, ಚಪ್ಪಲಿ,

ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಮಚ್ಚು ಹಾಗೂ ಚಾಕುವನ್ನು ಗುರುತಿಸಲು ಆಗುತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಹೇಳಿಕೆಯ ಭಾಗವನ್ನು ಓದಿ ಹೇಳಿದ್ದು ಅದರಂತೆ ತಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ ಎಂದು ಉತ್ತರಿಸಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ.1 ಎಂದು ಗುರುತಿಸಲಾಯಿತು. ನಾನು ಈಗ ಆರೋಪಿತರ ಜೊತೆ ರಾಜಿ ಮಾಡಿಕೊಂಡು ನ್ಯಾಯಾಲಯ ಮುಂದೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಶ್ರೀ.ಪಿ.ಕೆ.ಕೆ.ವಕೀಲರಿಂದ ಹಾಗೂ 3 ನೇ ಆರೋಪಿಪರ ಶ್ರೀ.ಕೆ.ಎಲ್.ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

4 ನೇ ಆರೋಪಿಪರ ವಕೀಲರನ್ನು ಕೂಗಿಸಿದ್ದು ಗೈರು ಹಾಜರಿದ್ದು, ಯಾರೂ ಪ್ರತಿನಿಧಿಸದೇ ಇರುವ ಕಾರಣ ಆತನಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.